3. ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013 ನೇ ಸಾಲಿನ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕ, ಪರ್ಯಾಲೋಚನಾ ಪ್ರಸ್ತಾವ

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013 ನೇ ಸಾಲಿನ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಇದೊಂದು ನಮ್ಮ ದೇಶದ ಒಂದು ಪ್ರತಿಷ್ಠಿತ ಸಂಸ್ಥೆ. The Foundation for Revitalization of Local Health Traditions, ಎನ್ನುವಸಂಸ್ಥೆ ಬೆಂಗಳೂರಿನಲ್ಲಿದೆ. ಇದರ ಅಧ್ಯಕ್ಷರು ಸ್ವಾಮ್ ಪಿತ್ರೋಡಾರವರು ಮತ್ತು ಪ್ರೊ. ಬಾಲಸುಬ್ರಮಣ್ಯಂರವರು ಇದರ ಸದಸ್ಯರಾಗಿದ್ದಾರೆ. Director,Centre for Indian Knowledge systemsಅವರು ಇದರ ಸದಸ್ಯರು. ಅದೇ ರೀತಿ ಪದ್ಮಶ್ರೀ awardee ಶ್ರೀ ದರ್ಶನ್ ಶಂಕರ್‌ರವರು ಇದರ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ರೀತಿಯ ಬಹಳ ಪ್ರತಿಷ್ಠಿತ ವ್ಯಕ್ತಿಗಳು ಇರುವ ರೀತಿ ಯಾವ ರೀತಿ ಅಜೀಮ್ ಪ್ರೇಮ್‌ಜಿಯವರ ವಿಶ್ವವಿದ್ಯಾಲಯವನ್ನು ನಾವು ಮಾಡಿಕೊಟ್ಟಿವೋ, ಅಷ್ಟೇ ಒಂದು Prestigious institute ಈಗ ನಮ್ಮ ದೇಶದ ಆಯುರ್ವೇದ ಶಾಸ್ತ್ರ ಮತ್ತು ಆಧುನಿಕ ವಿಜ್ಞಾನಗಳ ಮಧ್ಯೆ ಸಮನ್ವಯಕ್ಕೆ ಅಗತ್ಯವಾದಂತಹ ಸಂಶೋಧನೆಯನ್ನು ಮಾತ್ರ ಕೈಗೆತ್ತಿಕೊಳ್ಳುವ ದೃಷ್ಟಿಯಿಂದ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಮುಂದೆ ಬಂದಿದ್ದಾರೆ. ಭಾರತೀಯ ವೈದ್ಯ ಪದ್ಧತಿಗಳ ಆಳವಾದ ಸಂಶೋಧನೆ ಮತ್ತು ಪಾಶ್ಚಿಮಾತ್ಯ ವೈದ್ಯ ಪದ್ಧತಿಯ ಜೊತೆಗೆ ಅದನ್ನು ಹೇಗೆ ಬೆಸೆಯಬೇಕು ಮತ್ತು ವಿಶೇಷವಾಗಿ ಹೊಸ technologyಯಲ್ಲಿ ಈ ಸಂಶೋಧನೆ ಆಗಬೇಕೆನ್ನುವ ಉದ್ದೇಶ ಈ ಸಂಸ್ಥೆಗೆ ಇದೆ. ಈ ಸಂಸ್ಥೆ ಕಳೆದ 20 ವರ್ಷಗಳಿಂದ ಆಯುರ್ವೇದದಲ್ಲಿ ವಿಶೇಷವಾಗಿರತಕ್ಕಂಥ ಸಂಶೋಧನೆಯನ್ನು ಈಗಾಗಲೇ ಮಾಡುತ್ತಿದೆ. ಪ್ರಕೃತಿ ಚಿಕಿತ್ಸಾಲಯವನ್ನೂ ಕೂಡ ಅವರು ನಡೆಸುತ್ತಿದ್ದಾರೆ. ಈ ಸಂಸ್ಥೆಗೆ Ministry of

Health and Family welfare, AYUSHನವರು ಈಗಾಗಲೇCentre of Excellenceಎನ್ನುವ certificate ಅನ್ನು ಈ ಸಂಸ್ಥೆಗೆ ಕೊಟ್ಟಿದ್ದಾರೆ. ಅದೇ ರೀತಿ Ministry of Science and Technology, Ministry of Environmentಅವರೂ ಸಹ Centre of Excellence ಎನ್ನುವ certificate ಅನ್ನು ಈ ಸಂಸ್ಥೆಗೆ ಕೊಟ್ಟಿದ್ದಾರೆ. ಅದೇ ರೀತಿ ಈ ಸಂಸ್ಥೆIndian Institute of Science, Bangalore, Tata Institute of Fundamental Research, Mumbai, National Centre for Biological Sciences ಅವರುಗಳ ಜೊತೆಯಲ್ಲಿ ಸಂಶೋಧನಾ ಕೆಲಸವನ್ನು ಈಗಾಗಲೇ ಮಾಡುತ್ತಿದೆ ಮತ್ತು ರತನ್ ಟಾಟಾರವರು ಈ ವಿಶ್ವವಿದ್ಯಾಲಯಕ್ಕೋಸ್ಕರವೇ ಅಧ್ಯಯನ ಮಾಡಲಿ ಎನ್ನುವ ಕಾರಣಕ್ಕಾಗಿಯೇ 50 ಕೋಟಿ ರೂ.ಗಳ ಅನುದಾನವನ್ನು ಈಗಾಗಲೇ ಅವರಿಗೆ ನೀಡಿದ್ದಾರೆ. ಬೆಂಗಳೂರಿನಲ್ಲೇ ಈ ಸಂಸ್ಥೆ ಇದೆ. ಯಲಹಂಕದಿಂದ ದೊಡ್ಡಬಳ್ಳಾಪುರಕ್ಕೆ ಹೋಗುವಂತಹ ರಸ್ತೆಯಲ್ಲಿ ಆ ಸಂಸ್ಥೆ ಸದ್ಯಕ್ಕೆ ಕೆಲಸವನ್ನು ನಿರ್ವಹಿಸುತ್ತಿದೆ. ಇಂತಹ ಒಂದು ಪ್ರತಿಷ್ಠಿತ ವಿಶ್ವವಿದ್ಯಾಲಯ ಕರ್ನಾಟಕದಲ್ಲಿ ಸ್ಥಾಪನೆಯಾಗುತ್ತಿರುವುದು ನಮ್ಮೆಲ್ಲರ ಹೆಮ್ಮೆ. ಆ ಹಿನ್ನೆಲೆಯೊಳಗೆ ಮಾನ್ಯ ಅಧ್ಯಕ್ಷರಲ್ಲಿ ಮತ್ತು ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಇದೊಂದು ಖಾಸಗಿ ವಿಶ್ವವಿದ್ಯಾಲಯ. ಹಾಗಾಗಿ ಇವರು ಮಾಡುತ್ತಿರುವುದು UG ಆಗಲಿ ಮತ್ತೊಂದು award ಮಾಡಬೇಕೆನ್ನುವ ಉದ್ದೇಶ ಅವರಿಗೆ ಇಲ್ಲ.

ಆ research-oriented ವಿದ್ಯಾರ್ಥಿಗಳನ್ನು ಇದರಲ್ಲಿ ಎಳೆಯಬೇಕೆನ್ನುವಂತಹ ಉದ್ದೇಶವಿದೆ. ಪಿ.ಜಿ. ಮಾಡುವಂತಹ ಪಿಹೆಚ್‌ಡಿ ಮಾಡುವಂತಹ ವಿದ್ಯಾರ್ಥಿಗಳಿಗೆ ಅವಕಾಶ ಕೊಡಬೇಕೆಂದು ಹೇಳಿದ್ದಾರೆ. ಈ ಬಗ್ಗೆ ನಾವು condition ಹಾಕಿದ್ದೇವೆ. ಕರ್ನಾಟಕದ 40% ವಿದ್ಯಾರ್ಥಿಗಳಿಗೆ ಇದರಲ್ಲಿ ಅವಕಾಶವನ್ನು ಕೊಡಬೇಕು. ಉಳಿದಂತಹ ಖಾಸಗಿ ವಿಶ್ವವಿದ್ಯಾಲಯಗಳಿಗೆ conditions ಇದೆ. ಆ ಎಲ್ಲಾ conditionsಗಳನ್ನು ಇವರಿಗೆ apply ಮಾಡಿದ್ದೇವೆ. ಅದಕ್ಕೆ ಅವರು ಸೌಹಾರ್ದದಿಂದ ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ಸದನವು ಇದಕ್ಕೆ ಒಪ್ಪಿಗೆಯನ್ನು ನೀಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ವಿರೋಧ ಪಕ್ಷದ ಉಪನಾಯಕರು): ಮಾನ್ಯ ಅಧ್ಯಕ್ಷರೆ, ಈ ಖಾಸಗಿ Universityಗಳನ್ನು ತರಬೇಕಾದಾಗ ಆ University ಗಳ ವೈವಿದ್ಯಮವಾಗಿರತಕ್ಕಂತಹ ಉದ್ದೇಶಗಳು ಏನು ಎನ್ನುವುದರ ಬಗ್ಗೆ ಚರ್ಚೆಯಾಗುತ್ತಿತ್ತು. ಈ ಹಿಂದೆ ಒಂದು ವಿಶ್ವವಿದ್ಯಾಲಯ ಅಂದರೆonly teaching purpose was 99%.ಅದುteachingಗೋಸ್ಕರವೇ ಇದ್ದರೆ ಅದು ವಿಶ್ವವಿದ್ಯಾಲಯ ಎಂದು ಹೇಳುತ್ತಿದ್ದರು. ಆದರೆ ಇಲ್ಲಿ ವಿಭಿನ್ನವಾಗಿರುವುದು ಎಂದರೆ ಇವತ್ತು ಭಾರತೀಯ ವೈದ್ಯ ಪದ್ಧತಿಯ ಬಗ್ಗೆ ಸಂಶೋಧನೆಯನ್ನು ಮಾಡತಕ್ಕದ್ದು ಮತ್ತು ಅಭಿವೃದ್ಧಿ ಮಾಡಬಹುದು ದೃಷ್ಟಿಯಿಂದ ಮಾಡುತ್ತಿದ್ದಾರೆಂದು ಅದು ಸ್ವಾಗತ ಮಾಡುವಂತಹ ವಿಚಾರವೆ ಆಗಿದೆ. ಅದರಲ್ಲಿಯೂ ಕೂಡ ಸ್ವಾಮ್ ಪಿತ್ರೋಡಾರವರು ಅದಕ್ಕೆ ಮುಖ್ಯಸ್ಥರಾಗಿದ್ದಾರೆಂದಾಗ ಬಹುಶಃ ಅದನ್ನು ನಾವು ನಂಬಬಹುದು ಅದಕ್ಕೆ ಬೆಂಬಲವನ್ನೂ ಸಹ ಕೊಡಬಹುದು. ನನಗೆ ಒಂದು ಸಂತೋಷವೆಂದರೆ ಈಗ ನೀವು shift in the field of Health Sciences through development of outstanding leadership, research, knowledge and ideas of trans-disciplinary Health Sciences and Technology and allied sectors, that is very important.ಏಕೆಂದರೆ Universityಅಂದರೆ ಬರೀteachingಆಗುವುದು ಬೇಡ. Research also should be mandatory. Research & Development and Extensionಏಕೆಂದರೆ ಇದು ಭಾರತೀಯ ವೈದ್ಯ ಪದ್ಧತಿಗೆ ಸಂಬಂಧಪಟ್ಟಂತೆಎಂದು ಅಂದಾಗ ನಾನು ತಮಗೆ ಒಂದು ಸಲಹೆಯನ್ನು ಕೊಡುತ್ತೇನೆ. ನೀವು ಇದನ್ನು ಎಲ್ಲೋ ಒಂದು ಕಡೆಗೆit should be helpful for the extension and cultivation also. Soಹಾಗಾಗಿ ನೀವುresearchಎಂದು ಹೇಳಿknowledgeನಲ್ಲಿದ್ದಾಗ ನೀವುextension alsoಎಂದು ಸೇರಿಸಿದರೆ ಅದು ಇನ್ನಷ್ಟು ಒಳ್ಳೆಯದಾಗುತ್ತದೆ.Mandate for the Universiry is Research, Development and Extension and then Teaching. That is the fourth one.ಆ ರೀತಿಯಾಗಿ ನೀವು concept ಇಟ್ಟುಕೊಂಡು ಮಾಡಿದರೆ ಖಂಡಿತವಾಗಿಯೂ ಒಳ್ಳೆಯದಾಗುತ್ತದೆ. ಬಹುಶಃ ಈಗಾಗಲೇ ನೀವು ಹೇಳುತ್ತಿರುವಂತಹ background ಅನ್ನು ನೋಡಿದಾಗ ನಾವು ಖಂಡಿತವಾಗಿಯೂ ಕೂಡ

ಮುಕ್ತಕಂಠದಿಂದ ಸ್ವಾಗತಿಸುವಂತಹ ಒಂದು ಬಿಲ್ ಆಗುತ್ತದೆ. ಆದಷ್ಟು ಬೇಗನೆ ಇದು existence ಗೆಬಂದಂತಹ ಸಂದರ್ಭದಲ್ಲಿ ದಯಮಾಡಿ ಇದನ್ನು ಈ ಮನೆಯ ಎಲ್ಲಾ ಸದಸ್ಯರೆಲ್ಲರನ್ನು ಕೂಡ ಯಾರನ್ನಾದರೂ ಕರೆದುಕೊಂಡು ಹೋಗಿ interestಆಗಿ ಇರುವವರನ್ನು ತೋರಿಸಿದರೆ ಅದು ಒಳ್ಳೆಯದಾಗುತ್ತದೆ. ಏಕೆಂದರೆ ಯಾರು ಸ್ಯಾಮ್ ಪಿತ್ರೋಡಾ ರವರು ಇದ್ದಾಗ ಮಾತ್ರ ನೀವು ಆ Research & Development ಗೆಅವಕಾಶವಿರುತ್ತದೆ. ಇದು ಬೇರೆ ಕಡೆ ಇರುವುದಿಲ್ಲ. ನೀವು ಬೇರೆ ಬೇರೆ University ಗಳಲ್ಲಿ ಮಾಡಿದ್ದೀರಿ. ಅದರ ಬಗ್ಗೆ ನಾನು ಮಾತನಾಡುವಾಗ ಒಂದು ಮಾತನ್ನು ಹೇಳುವುದನ್ನು ಮರೆತೆ. ಕೆಲವು ಸದಸ್ಯರುಗಳು ಮಾತನಾಡಬೇಕಾದಾಗ ಹೇಳಿದರು. ಈ ಅಜೀಂ ಪ್ರೇಮ್‌ಜಿ Wipro University ಮಾಡಬೇಕಾದಾಗ ಅವರದ್ದು ಒಂದು ಸಂಸ್ಥೆಯೂ ಇರಲಿಲ್ಲ. ಒಂದು ಸಂಸ್ಥೆಯೂ ಇಲ್ಲದೆ ಇದ್ದಾಗ Universityಯನ್ನು ಏಕೆ ಕೊಟ್ಟಿರಿ ಎಂದು ಹೇಳಿದರು. ಆಗ ನಾನು ಎದ್ದು ಹೇಳೋಣ ಎಂದು ಇದ್ದೆ ಬೇಡವೆಂದು ಸುಮ್ಮನಾದೆ. ಆದರೆ actually ಅಲ್ಲೂ ಅಷ್ಟೇ what is involved is Research & Training. Research, Development& Training, that is also a mandate for the University. So ಆ aspects ನಲ್ಲಿನೀವು ಇದನ್ನು ತೆಗೆದುಕೊಂಡರೆ ಖಂಡಿತವಾಗಿಯೂ ನಾವು Researchಗೆ ಪ್ರೋತ್ಸಾಹವನ್ನು ಕೊಟ್ಟಂತಾಗುತ್ತದೆ. It is a good idea and please widen your concept for the opening of the University in a broader line. That is my suggestion.

ಶ್ರೀ ಬಂಡೆಪ್ಪ ಖಾಶೆಂಪೂರ್: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಟಿ.ಬಿ ಜಯಚಂದ್ರರವರು ಹೇಳಿದ ಹಾಗೆ ಮುಖ್ಯಸ್ಥರಾದ ಶ್ರೀ ಸ್ಯಾಮ್ ಪಿತ್ರೋಡಾ ಆಮೇಲೆ ಇದರಲ್ಲಿ ಒಬ್ಬ Directorರೆಲ್ಲರೂ ಸೇರಿ ಒಂದು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಮಾಡುತ್ತಿದ್ದಾರೆ. ಆದರೆ ನಿನ್ನೆ ದಿನ ನಾವು ಖಾಸಗಿ ವಿಶ್ವವಿದ್ಯಾಲಯ ಬಿಲ್‌ಗಳು ಬಂದಾಗ ಸಾಕಷ್ಟು ಅದರ ಮೇಲೆ ಬೆಳಕು ಚೆಲ್ಲಿದ್ದೇವೆ. ಅದೇ ಒಂದು reservation ಬಗ್ಗೆ ನಾವು ಇವತ್ತು ಹೇಳಬೇಕಾದರೆ ನಾವು mandatory ಮಾಡಿ ಇವತ್ತು 40% ಖಾಸಗಿ ವಿಶ್ವವಿದ್ಯಾಲಯಗೆ ಕೊಟ್ಟಿದ್ದೇವೆ. ಏಕೆಂದರೆ ಇದು ಪಿ.ಜಿ.ಗಳಿಗೆಲ್ಲಾ ಅವರು ತೆಗೆದುಕೊಳ್ಳುತ್ತಾರೆ. ಹಾಗಾಗಿ ಇದರಲ್ಲಿ ಆ ಒಂದು

Condition ಮುಖಾಂತರ ಇದೆಯಲ್ಲಾ ತಾವು ಇದನ್ನು ಮಾಡಬಹುದು ಎಂದು ನಾನು ಹೇಳುತ್ತೇನೆ.

ಅಧ್ಯಕ್ಷರು: ಆಯಿತು. ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಕರ್ನಾಟಕ ವಿಧಾನಪರಿಷತ್ತಿನಿಂದ..

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: Universities ಬಗ್ಗೆ explain ಮಾಡುವಾಗ broader lineಎಂದು ಹೇಳುತ್ತಿದ್ದೇವೆ. ಆದರೆ ಅದನ್ನುacceptಮಾಡುತ್ತೀರ ಹೇಗೆ?

ಅಧ್ಯಕ್ಷರು: ಆಯಿತು.

ಶ್ರೀ ಬಂಡೆಪ್ಪ ಖಾಶೆಂಪೂರ್: Reservation ಎಲ್ಲವನ್ನು ನಾವುmaintainಮಾಡುತ್ತೇವೆಂದು ಹೇಳಲಿ.

ಶ್ರೀ ಟಿ.ಬಿ.ಜಯಚಂದ್ರ: ಆ ವಿಶ್ವವಿದ್ಯಾಲಯಗಳು ಬರೀ ಟೀಚಿಂಗ್‌ಗೆ ಎಂದು ಆಗಬಾರದು.

ಅಧ್ಯಕ್ಷರು: ಮಾನ್ಯ ಸಚಿವರು ಟೀಚಿಂಗ್‌ಗೆ ಅಲ್ಲವೆಂದು ಹೇಳಿದ್ದಾರಲ್ಲಾ?

ಶ್ರೀ ಟಿ.ಬಿ.ಜಯಚಂದ್ರ: ಅದು mandate for University.

ಅಧ್ಯಕ್ಷರು: I think he has explained it.

ಶ್ರೀ ಅರವಿಂದಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಉಪನಾಯಕರಾದಂತಹ ಶ್ರೀ ಟಿ.ಬಿ.ಜಯಚಂದ್ರರವರು ಎರಡು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. Extension ಮತ್ತು Cultivation ಎನ್ನುವಂತಹ point ಅನ್ನು ಇದರಲ್ಲಿ include ಮಾಡಿ ಎಂದು ವಿಷಯವನ್ನು ಹೇಳಿದರು. Definitely, ಏಕೆಂದರೆ ಇದೊಂದು Research University. It is a unique kind of University, nowhere in the world. ಅಂತಹ ಒಂದು ವಿಶ್ವವಿದ್ಯಾಲಯವನ್ನು ನಮ್ಮ ಸದನವು ಒಪ್ಪಿ ಸ್ಥಾಪನೆಗೆ ಅವಕಾಶವನ್ನು ಮಾಡಿಕೊಡುತ್ತಿರುವಂತಹ ಸಂದರ್ಭದಲ್ಲಿ ತಾವು ಕೊಟ್ಟಿರುವಂತಹ

ಅಮೂಲ್ಯವಾದ ಎರಡು ಸಲಹೆಗಳನ್ನು ನಿಶ್ಚಿತವಾಗಿ ಅದನ್ನು ಇದರಲ್ಲಿ include ಮಾಡುವಂತಹ ಕೆಲಸ ನಾವು ಮಾಡುತ್ತೇವೆ.

ಶ್ರೀ ಸೈಯದ್ ಯಾಸೀನ್: Ayurveda, Yoga ಇದೆಲ್ಲಾ include ಆಗಬೇಕು.

ಶ್ರೀ ಅರವಿಂದ ಲಿಂಬಾವಳಿ: ತಾವು ಹೇಳುತ್ತಿರುವುದು, ಹೌದು. ಯಾವ ರೀತಿಯಾಗಿ ಶ್ರೀ ಅಜೀಂ ಪ್ರೇಮ್‌ಜಿಯ ವಿಶ್ವವಿದ್ಯಾಲಯ ಮಾಡುವಾಗ ತಾವು ಏನು ಪ್ರಸ್ತಾಪವನ್ನು ಮಾಡಿದ್ದೀರಿ, ಅದು ಕೂಡ ಒಂದು ವಿಶಿಷ್ಟವಾಗಿರುವಂತಹ ವಿಶ್ವವಿದ್ಯಾಲಯವಾಗಿದೆ. ಅದು ನಮ್ಮ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಕರಿಗೆ ತರಬೇತಿಯನ್ನು ಕೊಡುವಂತಹ ಒಂದು ವಿಶ್ವವಿದ್ಯಾಲಯವಾಗಿದೆ. Mode of Education ಯಾವ ರೀತಿಯಾಗಿ ಬರುವ ದಿನಗಳಲ್ಲಿ ಆಗಬೇಕು, ಅವರಿಗೆ ಯಾವ ರೀತಿಯಾಗಿ training ಬೇಕು, ಈ ತರಹದ ಒಂದು ವಿಶ್ವವಿದ್ಯಾಲಯವನ್ನು ಅವರು ಸ್ಥಾಪಿಸಿದ್ದಾರೆ. ಬರೀ ಈ ವಿಶ್ವವಿದ್ಯಾಲಯವು teaching ಗೋಸ್ಕರ ಮಾಡುವಂತಹ ವಿಶ್ವವಿದ್ಯಾಲಯವಲ್ಲ. ಇದು Research. ಈಗ ಮಾನ್ಯ ಸದಸ್ಯರಾದ ಶ್ರೀ ಬಂಡೆಪ್ಪ ಖಾಶೆಂಪೂರ್‌ರವರು ಹೇಳಿದರು. ನನಗೆ ಒಂದು ಹೆದರಿಕೆ ಏನು ಇರುವುದು ಎಂದರೆ Reservation ಮತ್ತೊಂದನ್ನು ನಾವು ಇದರಲ್ಲಿ include ಮಾಡಿದ್ದೇವೆ, already it is there. ಆದರೆ candidates ಸಿಗುತ್ತಾರೋ ಇಲ್ಲವೋ ಎನ್ನುವಂತಹ doubt ಇದೆ. ಏಕೆಂದರೆ ನಾನು Higher Education Ministerಇದ್ದಾಗ ಅನುಭವ ಆಗಿದೆ. ಅದನ್ನು ತೆಗೆಯಬೇಕೆಂದು ನಾನು ಹೇಳುತ್ತಿಲ್ಲ. ಅದನ್ನು ನಾವು ಇಟ್ಟಿದ್ದೇವೆ. ಡಾ: ಸಿ.ಎನ್.ಆರ್.ರಾವ್ ರವರನ್ನು, ಉನ್ನತ ಶಿಕ್ಷಣ ಸಚಿವನಾಗಿದ್ದಾಗ ನಾನು ಭೇಟಿ ಮಾಡಿದಾಗ ಅವರು ನನಗೆ ಕರೆದು ಹೇಳಿದರು. ಕರ್ನಾಟಕದಿಂದ ಅಥವಾ ಇಡೀ ದೇಶದಿಂದ ಯಾವ ವಿದ್ಯಾರ್ಥಿಗಳು ಬರುತ್ತಾರೋ ಅವರೆಲ್ಲರನ್ನು ನಾವು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ. ಆದರೆ Research ಗೆಂದು ಹೇಳಿದರೆ ವಿದ್ಯಾರ್ಥಿಗಳು ಬರದೆ ಇರುವಂತಹ ಸ್ಥಿತಿಗೆ ನಾವು ತಲುಪಿಬಿಟ್ಟಿದ್ದೇವೆ ಮತ್ತು ಆಶ್ಚರ್ಯಕರ ಆಘಾತಕಾರಿ ಸಂಗತಿಯನ್ನು ಅವರು ಹೇಳಿದ್ದೇನೆಂದರೆ, ಇನ್ನೊಂದು ಹತ್ತುವರ್ಷವಾದರೆ ನಮ್ಮ ಹೈಸ್ಕೂಲ್‌ಗಳಲ್ಲಿ Mathematics, Science ಕಲಿಸುವುದಕ್ಕೂ ಸಹ ಟೀಚರ್ಸ್ ಸಿಗದೆ ಇರುವಂತಹ ಪರಿಸ್ಥಿತಿಗೆ ನಾವು

ಬಂದುಬಿಡಬಹುದು. ಅಷ್ಟರಮಟ್ಟಿಗೆ Researchಗೆವಿದ್ಯಾರ್ಥಿಗಳು ಬರುತ್ತಿಲ್ಲ ಮತ್ತು ಅಧ್ಯಯನವನ್ನೂ ಸಹ ಮಾಡುತ್ತಿಲ್ಲವೆನ್ನುವಂತಹ ಮಾತನ್ನು ಅವರು ಹೇಳಿದರು. ಅದಕ್ಕೆ ನಾವು Research ಗೆ attract ಮಾಡುವಂತಹ ಎಲ್ಲಾ facilities automaticallyಸಿಕ್ಕೇ ಸಿಗುತ್ತದೆ. State Governmentನಾಳೆ ಇದಕ್ಕೆsupportಮಾಡುವಂತಹ ಪರಿಸ್ಥಿತಿಯೂ ಬರಬಹುದು. ಇದಕ್ಕೆ ಕೇಂದ್ರ ಸರ್ಕಾರವೂ ಸಹ support ಮಾಡಬಹುದು. ಈಗಂತೂ ನಾವು ಯಾವ condition ಅನ್ನು ಹಾಕಿಲ್ಲ. ಸರ್ಕಾರದಿಂದ ನಿಮಗೆ ಯಾವುದೇ ಸಹಾಯವನ್ನು ಕೊಡುವುದಿಲ್ಲವೆಂದು ಹೇಳಿದ್ದೇವೆ. ಆದರೂ ಕೂಡ ಇಂತಹ ಒಂದು ಒಳ್ಳೆಯ ವಿಶ್ವವಿದ್ಯಾಲಯವು ಸ್ಥಾಪನೆಯಾಗುತ್ತಿರುವುದರಿಂದ ತಾವು ಹೇಳಿರುವಂತಹ ಅಂಶಗಳ ಸಮೇತವಾಗಿ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸುತ್ತೇನೆ.

ಅಧ್ಯಕ್ಷರು: ಉಪಾಧ್ಯಕ್ಷರು ಈ ಬಗ್ಗೆ ಏನು ಹೇಳುತ್ತಾರೆ ಕೇಳೋಣ ತಾವು ಹೇಳಿ.

ಶ್ರೀ ಎನ್.ಯೋಗೀಶ್‌ಭಟ್ (ಮಾನ್ಯ ಉಪಾಧ್ಯಕ್ಷರು): ಮಾನ್ಯ ಅಧ್ಯಕ್ಷರೆ, ಇದು ಅತ್ಯಂತ ಪ್ರಮುಖವಾಗಿರುವಂತಹ ಬಿಲ್ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಚ್ಚಿಸುತ್ತೇನೆ. ಇತ್ತೀಚೆಗೆ ಮಂಗಳೂರಿನಲ್ಲಿ ಸುಮಾರು 13 ಜನ ಅಮೆರಿಕನ್ಸ್ ಬಂದರು. ಅವರು ಬಂದಿರುವವರು Psychiatrists ಇದ್ದರು, Doctors ಇದ್ದರು. ಬೇರೆಬೇರೆ Faculties ಅಲ್ಲಿ ಇದ್ದವರು ಇದ್ದರು. ಯೋಗಾ ಸಿಸ್ಟಮ್‌ನಲ್ಲಿರುವಂತಹ ಒಂದು ವೈಶಿಷ್ಟ್ಯತೆ ಬೇರೆ ಕಡೆಗಳಲ್ಲಿ ಆಗದೆ ಇರುವುದನ್ನು ಯಾವ ರೀತಿಯಾಗಿ ಇದರಲ್ಲಿ treatment ತೆಗೆದುಕೊ-ಳ್ಳಬಹುದು ಎಂಬುದರ ಬಗ್ಗೆ ಅಧ್ಯಯನ ಮಾಡುವುದಕ್ಕೆ ಇಲ್ಲಿಗೆ ಬಂದಿದ್ದರು. ಇಷ್ಟೊಂದು ವೈಶಿಷ್ಟ್ಯವುಳ್ಳ ವಿಜ್ಞಾನದ ಬಗ್ಗೆ ನಮಗೆ ಅಲೋಪತಿ ಸಿಸ್ಟಮ್‌ನಲ್ಲಿ ನಮಗೆ ಸಿಗುತ್ತಿಲ್ಲ ಎನ್ನುವಂತಹ ಮಾಹಿತಿ ಇದೆ. ಇನ್ನು ಎರಡನೆಯ ಉದಾಹರಣೆಯನ್ನು ಹೇಳುತ್ತಿರುವುದು ಜಪಾನ್ ದೇಶಕ್ಕೆ ಸಂಬಂಧಪಟ್ಟಹಾಗೆ ಇತ್ತೀಚೆಗೆ ಆರ್ಯುವೇದಿಕ್ ಸಿಸ್ಟಮ್‌ಗೆ ಸಂಬಂಧಪಟ್ಟ ಹಾಗೆ acceptance ಮಾಡುವುದಕ್ಕೆ ಶುರು ಮಾಡಿದ್ದಾರೆ. ಆದರೆ ವೈಜ್ಞಾನಿಕ ಚೌಕಟ್ಟು ಇಲ್ಲ ಎಂದು ಹೇಳುವಂತಹ ಆಧಾರದಲ್ಲಿ ನೇರವಾಗಿ implement ಮಾಡುವುದಕ್ಕಾಗುತ್ತಿಲ್ಲ.

ಈ ಪಂಚಕರ್ಮ ಇರಬಹುದು ಅಥವಾ ಬೇರೆ ಸಿಸ್ಟಮ್‌ಗಳು ಇರಬಹುದು. ಅದಕ್ಕೋಸ್ಕರ ಅವರು scientific backgroundಇರುವಂತಹ ನಿಟ್ಟಿನಲ್ಲಿ ತಾವು ಇದನ್ನು ಮಾಡಿoff therecordಅದನ್ನು ಸ್ವೀಕಾರ ಮಾಡುತ್ತಿದ್ದಾರೆ. ಇದರ ಪರಿಣಾಮ ಚೆನ್ನಾಗಿದೆ. ಆದರೆresultಅದರಲ್ಲಿ ಸಿಗುತ್ತಿಲ್ಲ, certification ಸಿಗುತ್ತಿಲ್ಲ. Scientific background ಏನು ಹೇಳಿದರೆ ಅವರ ಹತ್ತಿರ ನಮ್ಮ systemನಲ್ಲಿ explanation ಇಲ್ಲ. ಅದು ಆರ್ಯುವೇದಿಕ್ ಸಿಸ್ಟಮ್ ಇರಬಹುದು. ಯುನಾನಿ ಸಿಸ್ಟಮ್ ಇರಬಹುದು, ನಮ್ಮ Healing system ಇರಬಹುದು. ಅನೇಕ ತರಹ ಇರುವಂತಹ system ಗಳಲ್ಲಿ ವೈಜ್ಞಾನಿಕ ಚೌಕಟ್ಟು ಏನಿದೆ ಎಂದರೆ ಅದು ನಮ್ಮ ಹತ್ತಿರ ಇಲ್ಲ. ಮಾನ್ಯ ಅಧ್ಯಕ್ಷರಲ್ಲಿ ನಾನು ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಷ್ಯಾ ದೇಶದಿಂದ ಒಂದು special instrumentಬಂತು ಆ special instrument ಅದನ್ನು ಸ್ಟಾಲಿನ್ ಟೈಮ್‌ನಲ್ಲಿ ಉಪಯೋಗ ಮಾಡುತ್ತಿದ್ದರು. ಅದರಲ್ಲಿರುವಂತಹ ವೈಶಿಷ್ಟ್ಯತೆ ಏನೆಂದರೆ ಆ instrument ಎದುರುಗಡೆ ಒಬ್ಬರನ್ನು ಇಟ್ಟರೆ ಸಾಕು overall ಅದರಲ್ಲಿ record ಆಗಿಬಿಡುತ್ತದೆ. ಹಿಂದೆ 6 ತಿಂಗಳ ಒಳಗಡೆ ಯಾವ ಸಿಸ್ಟಮ್‌ನಲ್ಲಿ ಏನು ತೊಂದರೆ ಬರುತ್ತದೆ ಎಂದು ಹೇಳುವಂತಹ,readಮಾಡುವಂತಹ ಒಂದು instrument Mangalore Universityಯಲ್ಲಿ Yoga System ನಲ್ಲಿವಿಶೇಷ ಕೊಡುಗೆಯಾಗಿ ಕೊಡಲ್ಪಟ್ಟಿದೆ. ಯಾವ base ಮೇಲೆ ಕೊಡಲ್ಪಟ್ಟಿದೆ ಎಂದರೆ ನಿಮಗೆ ಆಶ್ಚರ್ಯವಾಗುತ್ತದೆ. ಅವರ condition ಒಂದೇ ಇತ್ತು Physics ಇದರಲ್ಲಿ Doctorate ಇರಬೇಕು. Yogaದಲ್ಲಿ Doctorate ಇದ್ದವರಿಗೆ ನಾವು ಕೊಡುತ್ತೇವೆ.

ನಮ್ಮ ಮಂಗಳೂರಿನ ಸೆಂಟರ್‌ನಲ್ಲಿ ಯೋಗ faculty ಈ ಎರಡರಲ್ಲಿಯೂ ಡಾಕ್ಟರೇಟ್ ಇದ್ದವರಿಗೆ ಕೊಟ್ಟರು. ಅದರ ಬಗ್ಗೆ ಸಂಶೋಧನೆಗಳು ನಡೆಯುತ್ತಿದೆ. ಇದನ್ನು scientific ಆದ ಚೌಕಟ್ಟಿನಲ್ಲಿ ತರುವಂಥ ಪ್ರಯತ್ನ ಇಲ್ಲಿಯವರೆಗೆ ಆಗಲಿಲ್ಲ. ಇದು ಬಹಳ ದೊಡ್ಡ ಪ್ರಯೋಗ. ಇದು ಯಶಸ್ವಿಯಾದಾಗ ನಮ್ಮಲ್ಲಿರುವ ಅನೇಕ ಸಮಿತಿಗಳಿಗೆ ಒಂದು ಆಯಾಮ ಸಿಗುತ್ತದೆಂದು ಹೇಳಬಯಸುತ್ತೇನೆ. ಈಗ ನಮ್ಮಲ್ಲಿ ಎಲ್ಲಾ Object based

system ಇರುವುದು. subject based systemಇಲ್ಲ. ಮೆಡಿಕಲ್ ಸಿಸ್ಟಮ್ ನಾಲ್ಕು ಸಮಿತಿಗಳನ್ನು accept ಮಾಡಿದೆ. Earlier physical treatment ಬಗ್ಗೆ ಮಾತ್ರ ಯೋಚನೆ ಇತ್ತು.Second, physiologicalಬಗ್ಗೆ ಬಂದಿತು. ಮೂರನೆಯದು social ಬಗ್ಗೆ acceptance ಇತ್ತು. Fourth spiritual ಬಗ್ಗೆ acceptance ಬಂದಿದೆ. what is spiritual, what is Social ಎನ್ನುವುದರ ಬಗ್ಗೆ definition ಇಲ್ಲ. ಹೀಗಾಗಿ ಇವೆಲ್ಲವನ್ನೂ scientific ಚೌಕಟ್ಟಿನಲ್ಲಿ ತರುವಂಥ ಯೋಗ್ಯ ಬಿಲ್ ಆಗಿದೆ. ಇದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ ಎಂಬ ಅಂಶವನ್ನು ತಮ್ಮ ಮೂಲಕ ಹೇಳಲಿಚ್ಛಿಸುತ್ತೇನೆ.

ಅಧ್ಯಕ್ಷರು: ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಈ ವಿಧೇಯಕ ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾಗಿ ಬಂದಿದೆ.

ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ

2013ನೇ ಸಾಲಿನ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು, ತಂತ್ರಜ್ಞಾನ ಸಂಸ್ಥೆಯ ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ 2ರಿಂದ 61

ಅಧ್ಯಕ್ಷರು: 2 ರಿಂದ 61ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

2 ರಿಂದ 61 ರವರೆಗಿನ ಖಂಡಗಳು ವಿಧೇಯಕದ ಅಂಗವಾಯಿತು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(2 ರಿಂದ 61ರವರೆಗಿನ ಖಂಡಗಳನ್ನು ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು: ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.
ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ
ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಅಧ್ಯಕ್ಷರು: ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

ಅಂಗೀಕಾರ ಪ್ರಸ್ತಾವ

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ **2013 ನೇ ಸಾಲಿನ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು, ತಂತ್ರಜ್ಞಾನ ಸಂಸ್ಥೆಯ ವಿಧೇಯಕವನ್ನು** ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013 ನೇ ಸಾಲಿನ ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು, ತಂತ್ರಜ್ಞಾನ ಸಂಸ್ಥೆಯ ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು)

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

13. ಪ್ರಕಟಣೆ

ಅಧ್ಯಕ್ಷರು: ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡೆವಳಿಕೆ ನಿಯಮ 118ರ ಮೇರೆಗೆ ವಿಧಾನಪರಿಷತ್ತು 2013ನೇ ಸಾಲಿನ ಮಲೆ ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸ–ಲಾಗಿದೆಯೆಂದು ತಿಳಿಸಿರುತ್ತಾರೆ.

ನಾಳೆ ಮಧ್ಯಾಹ್ನ 1.30 ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಧಾನಮಂಡಲದ ಉಭಯ ಸದನಗಳು ಸದಸ್ಯರುಗಳು ಹಾಗೂ ಮಾಧ್ಯಮ ಮಿತ್ರರ ಗೌರವಾರ್ಥ ಭೋಜನಕೂಟವನ್ನು ಏರ್ಪಡಿಸಿರುತ್ತೇನೆ. ಆಮಂತ್ರಣವನ್ನು